ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಚಿಮ್ಮನ ಕಟ್ಟಿಯವರು ಕೇಳಿದ ಪ್ರಶ್ನೆ ಬಹಳ ಪ್ರಮುಖವಾಗಿದೆ; ನಮಗೆ ಲಿಮಿಟ್ ಇದ್ದುದು 250ಕೋಟಿ ಅದನ್ನು ಇಷ್ಟೂ ಮಾಡಿದ್ದೇವೆ, ಅದಕ್ಕೆ 20 ಪರ್ಸೆಂಟ್ ಎಕ್ಸ್‌ಟ್ರಾ ಎಂದರೆ 300 ಕೋಟಿ ಆಯಿತು. ಆದ್ದರಿಂದ ನಾವು ರಿಸರ್ವ್ ಬ್ಯಾಂಕ್‌ನಲ್ಲಿ ಅದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಅದಕ್ಕೆ ಪ್ರತಿ ದಿವಸ ಇಂಟರೆಸ್ಟ್ ಹೆಚ್ಚಾಗುತ್ತದೆ. ಇದು ಸ್ವಲ್ಪ ಆಲೋಚನೆ ಮಾಡಿ ಇನ್‌ಕ್ರೀಸ್ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಹಣ ಬಂದರೆ ಆ ವರ್ಷದಲ್ಲಿ ಎಷ್ಟು ಖರ್ಚು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡೋಣ.

ವಿಷಯ :- ಕನಕಪುರ ರಸ್ತೆಯಲ್ಲಿ ಬನಶಂಕರಮ್ಮ ದೇವಸ್ಥಾನದ ಬಳಿ ರಸ್ತೆಯನ್ನು ಅಗಲಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 253 (1560)

ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) :- ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ರಸ್ತೆ-ಬನಶಂಕರಮ್ಮ ದೇವಾಲಯದ ಹತ್ತಿರ ರಸ್ತೆ ತುಂಬಾ ಕಿರಿದಾಗಿದ್ದು ವಾಹನ ಸಂಚಾರಕ್ಕೆ ತೊಂದರೆ ಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆ ಬದಿಯಲ್ಲಿರುವ ಕ್ವಾರಿ ಹಳ್ಳವನ್ನು ಮುಚ್ಚಿಸಿ ರಸ್ತೆ ಅಗಲಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಅನಂತ್ ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :-

ಅ) ಬಂದಿದೆ.

ಆ) ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆಯ ಅಗಲಗೊಳಿಸುವಿಕೆಯನ್ನು ಅವರ ಕಾರ್ಯಕ್ರಮ ಹಾಗೂ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ತಿಳಿಸಲಾಗುವುದು.

ಶ್ರೀ ಎಂ. ಶ್ರೀನಿವಾಸ್ :- ಸನ್ಮಾನ್ಯ ಸಭಾಧ್ಯಕ್ಷರೇ, ಕನಕಪುರ ರಸ್ತೆಯಲ್ಲಿ ಬನಶಂಕರಮ್ಮ ದೇವಸ್ಥಾನದ ಹತ್ತಿರ ದೊಡ್ಡ ಕ್ವಾರಿ ಹಳ್ಳ ಇದೆ. ಅದನ್ನು ಮುಚ್ಚಿಸಿ ರಸ್ತೆಯನ್ನು ಅಗಲ ಮಾಡಬೇಕೆಂದು ಕೇಳಿದ್ದೆ. ಅದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆಯ ಅಗಲಗೊಳಿಸುವಿಕೆಯನ್ನು ಅವರ ಕಾರ್ಯಕ್ರಮ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ತಿಳಿಸುತ್ತೇವೆಂದು ಹೇಳಿದ್ದಾರೆ. ಆ ಕ್ವಾರಿ ಹಳ್ಳ ಸುಮಾರು 100-150 ಅಡಿ ಆಳ ಇದೆ ಆದ ಕಾರಣ ಅದನ್ನು ಆದಷ್ಟು ಬೇಗ ಈ ಕಾರ್ಯ ಆರ್ಜೆಂಟಾಗಿ ತೆಗೆದುಕೊಳ್ಳುತ್ತೀರೋ?

ಶ್ರೀ ಅನಂತ್ ನಾಗ್ :- ಮಾನ್ಯ ಸಭಾಧ್ಯಕ್ಷರೇ, ಕನಕಪುರ ರಸ್ತೆ-ಬನಶಂಕರಮ್ಮ ದೇವಾಲಯದ ಹತ್ತಿರ ರಸ್ತೆ ತುಂಬಾ ಕಿರಿದಾಗಿದ್ದು, ಅದನ್ನು ಅಗಲ ಮಾಡುವ ಬಗ್ಗೆ ನಗರಪಾಲಿಕೆಯ ಗಮನಕ್ಕೆ ಬಂದಿದೆ. ಆ ಹಳ್ಳವನ್ನು ತುಂಬಿಸುವ ಕೆಲಸ ಶುರು ಮಾಡಿದ್ದೇವೆ. ಆದಷ್ಟು ಬೇಗ ಅದನ್ನು ಮಾಡಿ ಅಗಲ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಶ್ರೀನಿವಾಸ್ :- ಕನಕಪುರ ರಸ್ತೆಯ ಎಡಗಡೆ ಆಳ ಇದೆ. ಅದೆಲ್ಲವನ್ನೂ ಮುಚ್ಚಿಸಿ ರಸ್ತೆಯನ್ನು ಅಗಲ ಮಾಡುವ ಕಾರ್ಯಕ್ರಮವನ್ನು ಎರಡು ತಿಂಗಳೊಳಗಾಗಿ ಪ್ರಾರಂಭ ಮಾಡುತ್ತಿರೋ?

ಶ್ರೀ ಅನಂತ್ ನಾಗ್ :- ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭಿಸುತ್ತೇವೆ.

ವಿಷಯ :- ಉಡುಪಿ ನಗರದಲ್ಲಿ ಆರಕ್ಷಿತ ಠಾಣೆಯ ಕಟ್ಟಡ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 254 (1854)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರ ಆರಕ್ಷಕ ಠಾಣೆಯು ಬಾಡಿಗೆ ಕಟ್ಟಡದಲ್ಲಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆರಕ್ಷಕ ಠಾಣೆಗೆ ಕಟ್ಟಡ ಕಟ್ಟಲು ಜಾಗ ಮಂಜೂರಾಗಿದ್ದು ನೀಲಿ ನಕಾಶೆಗೆ ಅನುಮೋದನೆ ಸಿಕ್ಕಿದ್ದರೂ ಸಹ ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು?

ಇ) ಸದರಿ ಕೆಲಸ ಯಾವಾಗ ಪ್ರಾರಂಭವಾಗುವುದು (ವಿವರ ನೀಡುವುದು)?

ಶ್ರೀ ಆರ್. ರೋಷನ್ ಬೇಗ್ (ಗೃಹ ರಾಜ್ಯ ಸಚಿವರು) :-

ಅ) ಹೌದು.

ಆ) ಅನುದಾನ ಲಭ್ಯವಾಗದ ಮೂಲಕ ಈ ಕಟ್ಟಡದ ಆಡಳಿತಾತ್ಮಕ ಮಂಜೂರಾತಿಯನ್ನು ಇನ್ನೂ ನೀಡಿಲ್ಲ.

ಇ) ಮುಂದಿನ ವರ್ಷಗಳ ಆಯವ್ಯಯದಲ್ಲಿ ಸೂಕ್ತ ಅನುದಾನ ಒದಗಿಸಿ ಕೊಂಡು ಕಟ್ಟಡದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಯು. ಆರ್. ಸಭಾಪತಿ :- ಉಡುಪಿ ನಗರ ಆರಕ್ಷಕ ಠಾಣೆಯ ಬಾಡಿಗೆ ಕಟ್ಟಡವನ್ನು ತೆರವು ಮಾಡಲು ಯಾವ ಆದೇಶ ನೀಡಿದೆ? ಕೋರ್ಟ್ ಆದೇಶ ಇದ್ದರೂ ಕೂಡ ತಾವು ಇನ್ನೂ ತೆರವು ಮಾಡದಿದ್ದರೆ ಕಟ್ಟಡದ ಮಾಲೀಕರು ಏನು ಮಾಡಬೇಕು?